ದಿನಾಂಕಃ **04-01-2023** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಂ.ಡಿ ವಕೀಲರಿಂದಃ

1. ನಾನು ಹೋಟೆಲ್ ವ್ಯವಹಾರವನ್ನು ಸುಮಾರು 20 ವರ್ಷದಿಂದ ಮಾಡುತ್ತಿದ್ದೇನೆ. ಆರೋಪಿ ಚಿಕನ್ ಅಂಗಡಿ ಇಟ್ಟಿದ್ದರು ನನ್ನದು ಹಾಸನ್ ಕಿಂಗ್ಸ ಫೋರ್ಟ್ ಎಂದು ಡಾಬಾವನ್ನು ಹಾಸನ ಸರ್ಕಲ್ ನಲ್ಲಿ ನಡೆಸುತ್ತಿದ್ದೆ ಅದನ್ನು ನಡಸುವಾಗ ಅಲ್ಲಿಂದ ಚಿಕನ್ ನ್ನು ತರಿಸುತ್ತಿದ್ದೆ ಅದರ ಮೂಲಕ ಆರೋಪಿ ನನಗೆ ಪರಿಚಯ ಆಗಿರುತ್ತಾನೆ. ಆ ಸಂಬಂಧವಾಗಿ ಈ ದೂರಿನಲ್ಲಿ ಹೇಳಿರುವಂತೆ ವ್ಯವಹಾರ ಆಗಿರುತ್ತದೆ. ನಾನು ಕೊಟ್ಟಿರುವ ತಿಳುವಳಿಕೆ ಪತ್ರದಲ್ಲಿ ಅಥವಾ ಕಂಪ್ಲೆಂಟ್ ನಲ್ಲಿ ಈ ವಿಚಾರವನ್ನು ನಾನು ತಿಳಿಸಿರುವುದಿಲ್ಲ ನಾನು 2,50,000 ರೂ. ಹಣವನ್ನು ಒಂದೇ ಬಾರಿ ಆರೋಪಿಗೆ ಕೊಟ್ಟಿರುತ್ತೇನೆ. ಚೆಕ್‌ನ್ನು ಹೊರತು ಪಡಿಸಿ ಬೇರೆ ಯಾವುದಾದರೂ ಲಿಖಿತ ದಾಖಲಾತಿಗಳಲ್ಲಿ ಆರೋಪಿಗೆ ಹಣವನ್ನು ಕೊಟ್ಟಿರುವ ಬಗ್ಗೆ ಪಡೆದು ಕೊಂಡಿರುವುದಿಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಮತ್ತು ನನಗೂ ಆರೋಪಿಗೂ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ನಗದು ರೂಪದಲ್ಲಿ ಹಣವನ್ನು ಕೊಟ್ಟಿರುತ್ತೇನೆ. 1000 ರೂ. ಮುಖಬೆಲೆಯ 250 ನೋಟುಗಳನ್ನು ನಾನು ಆರೋಪಿಗೆ ಕೊಟ್ಟಿರುತ್ತೇನೆ. ನನ್ನ ಹತ್ತಿರ 2,50,000 ಇತ್ತು ಎಂದು ತೋರಿಸಲು ಮತ್ತು ಹೇಗೆ ಬಂತು ಎಂದು ತೋರಿಸಲು ಪ್ರಶ್ನಿಸಿದಾಗ ಸಾಕ್ಷಿ ನಾನು ಹೋಟೆಲ್ ವ್ಯವಹಾರ ಮಾಡಿರುತ್ತೇನೆ ಅದರಿಂದ ಬಂದಿರುತ್ತದೆ ಎನ್ನುತ್ತಾರೆ. ನಿಖರವಾಗಿ ಎಲ್ಲಿಂದ ಪಡೆದಿದ್ದೀನಿ ಅಥವಾ ಬ್ಯಾಂಕಿನಿಂದ ತೆಗೆದಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ.

2.ನನಗೂ ಆರೋಪಿಗೂ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಅದರಿಂದ ಯಾವುದೇ ದಾಖಲಾತಿ ನನ್ನ ಹತ್ತಿರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬೇಲೂರಿನಲ್ಲಿರುವ ರಾಜು ಅವರ ಮಗಳನ್ನು ನಾನು ಮದುವೆ ಮಾಡಿಕೊಂಡಿರುತ್ತೇನೆ. ನನ್ನ ಮಾವನವರಿಗೆ ಒಟ್ಟು 6 ಜನ ಮಕ್ಕಳು ಅದರಲ್ಲಿ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಗಂಡು ಮಕ್ಕಳ ಹೆಸರು ಮಂಜುನಾಥ, ರಾಜು ಮತ್ತು ಪ್ರಕಾಶ. ನನ್ನ ಹೆಂಡತಿಯ ಅಣ್ಣನಾದ ಮಂಜುನಾಥ ರವರು ಆರೋಪಿಯ ವಿರುದ್ಧ ಚಿಕ್ಕಮಗಳೂರಿನಲ್ಲಿ ಸಿಸಿ ನಂ. 297/2019 ನ್ನು ಚೆಕ್ ಬೌನ್ಸ್ ಆಗಿರುವ ಪ್ರಕರಣವನ್ನು ದಾಖಲೆ ಮಾಡಿದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದೆವರೆದು ನಾನು ಆರೋಪಿ ಮತ್ತು ಭಾವ ಎಲ್ಲರೂ ಸ್ನೇಹಿತರು ಮತ್ತು ನನ್ನ ಭಾವ ಮತ್ತು ಆರೋಪಿತರ ನಡುವೆ ಆಗಿರುವ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಮಂಜುನಾಥ ರವರು ಆರೋಪಿಯ ವಿರುದ್ಧ ಕೇಸನ್ನು ಹಾಕಿರುವ ವಿಷಯ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಭಾವ ಮಂಜುನಾಥ ರವರು ಸೇರಿ ಚಿಕ್ಕಮಗಳೂರಿನಲ್ಲಿ ಚೆಕ್ ಬೌನ್ಸ್ ಪ್ರಕರಣವನ್ನು ದಾಖಲೆ ಮಾಡಿರುತ್ತೇವೆ ಎಂರದೆ ಸರಿಯಲ್ಲ. ನಾನು ಮೊಬೈಲ್ ಯೂಸ್ ಮಾಡುತ್ತಾ ಇರುವ ನಂಬರ್ 9886966614 . ನನ್ನ ಭಾವ ರವರ ಮೊಬೈಲ್ ನಂಬರ್ ನನಗೆ ಈಗ ನೆನಪಿಲ್ಲ. ನಾನು ಮತ್ತು ನನ್ನ ಭಾವ ಸೇರಿಕೊಂಡು ಆರೋಪಿಯ ನಡುವೆ ರಾಜೀ ಅರ್ಜಿಯನ್ನು ಸಲ್ಲಿಸಿ ಈ ಕೇಸನ್ನು ಕೂಡ ನಾನು ಹಿಂಪಡೆಯಬೇಕೆಂದು ಸದರಿ ರಾಜೀ ಅರ್ಜಿಯನ್ನು

ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದೆವರೆದು ನಾನು ಸದರಿ ರಾಜೀ ಅರ್ಜಿಗೆ ಸಹಿ ಮಾಡಿರುವುದಿಲ್ಲ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಈ ಹಂತದಲ್ಲಿ ಶ್ರೀ ಎಂ.ಡಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.